1. ಕೇರಳದ ಈ ಕೆಳಗಿನ ಭೂಪ್ರದೇಶಗಳಲ್ಲಿ ಯಾವುದು ಸಮುದ್ರ ಮಟ್ಟಕ್ಕಿಂತ 75 ಮೀಟರ್ ಎತ್ತರದಲ್ಲಿದೆ ?
A) ಇಡನಾಡ್
B) ಮಲೆನಾಡ್
C) ಕರಾವಳಿ ಪ್ರದೇಶ
D) ಸಮತಟ್ಟು ಪ್ರದೇಶ

2. 'ಮಲಬಾರ್ ದಂಗೆ'ಗೆ ಸಂಬಂಧಿಸಿರುವ ಒಂದು ವಿಶಿಷ್ಟವಾದ ಘಟನೆ
1) ಪೊಕ್ಕೊಟ್ಟೂರ್ ಯುದ್ಧ
2) ಕುಲಚೆಲ್ ಯುದ್ಧ
3) ಕುರಿಚಿಯಾ ಪ್ರತಿಭಟನೆ
4) ಚಾನಾರ್ ಪ್ರತಿಭಟನೆ
A) 1, 2
B) 2, 3
C) 3, 4
D) 1

3. ಈ ಕೆಳಗಿನ ಪರ್ಯಾಯ ದ್ವೀಪ ನದಿಗಳಲ್ಲಿ ಪಶ್ಚಿಮದೆಡೆಗೆ ಹರಿಯುವ ನದಿ ಯಾವುದು ?
A) ಮಹಾನದಿ, ಗೋದಾವರಿ
B) ಕೃಷ್ಣಾ, ಕಾವೇರಿ
C) ನರ್ಮದಾ, ತಾಪ್ತಿ
D) ಸೋನ್, ಚಂಬಾಲ್

4. ಅಂಟಾರ್ಕ್‌ಟಿಕ್‌ದಲ್ಲಿರುವ ಭಾರತದ ಪ್ರಥಮ ಸಂಶೋಧನಾ ಕೇಂದ್ರ ಯಾವುದು ?
A) ಮೈತ್ರಿ
B) ಭಾರತಿ
C) ಹಿಮಾದ್ರಿ
D) ದಕ್ಷಿಣ ಗಂಗೋತ್ರಿ

5. ಸಿಕ್ಕಿಮ್ ಮತ್ತು ಟಿಬೆಟ್‌ಗಳನ್ನು ಸಂಪರ್ಕಿಸುವ ಕಣಿವೆ ಮಾರ್ಗ ಯಾವುದು ?
A) ನಾತುಲಾ ಕಣಿವೆ
B) ಲಿಪುಲೇಖ್ ಕಣಿವೆ
C) ಶಿಪ್ಕಿಲಾ ಕಣಿವೆ
D) ಸೊಜಿಲಾ ಕಣಿವೆ

6. ಟ್ರಿಪಾರ್ಟೈಟ್ ಒಪ್ಪಂದದಲ್ಲಿ ತೊಡಗಿರುವ ದೇಶಗಳು ಯಾವುವು ?
1. ಜರ್ಮನಿ, ಆಸ್ಟ್ರಿಯಾ-ಹಂಗೇರಿ, ಇಟಲಿ
2. ಇಂಗ್ಲೆಂಡ್, ಫ್ರಾನ್ಸ್, ರಷ್ಯಾ
3. ಜರ್ಮನಿ, ಇಟಲಿ, ಜಪಾನ್
4. ಇಂಗ್ಲೆಂಡ್, ಫ್ರಾನ್ಸ್, ಚೀನಾ
A) 1, 2
B) 2, 3
C) 2
D) 3, 4

7. ಸ್ಥಳ ವಿವರಣೆಯ ಭೂಪಟದಲ್ಲಿ ಡಿಗ್ರಿ ಶೀಟ್‌ನ ಅಕ್ಷಾಂಶ ಮತ್ತು ರೇಖಾಂಶ ರೇಖೆಗಳ ವಿಸ್ತೀರ್ಣ ಎಷ್ಟಿರುತ್ತದೆ ?
A) 4 – ಡಿಗ್ರಿ ಅಕ್ಷಾಂಶ ರೇಖಾಂಶ ವಿಸ್ತೀರ್ಣ
B) 1 – ಡಿಗ್ರಿ ಅಕ್ಷಾಂಶ ರೇಖಾಂಶ ವಿಸ್ತೀರ್ಣ
C) 15 – ಡಿಗ್ರಿ ಅಕ್ಷಾಂಶ ರೇಖಾಂಶ ವಿಸ್ತೀರ್ಣ
D) 10 – ಡಿಗ್ರಿ ಅಕ್ಷಾಂಶ ರೇಖಾಂಶ ವಿಸ್ತೀರ್ಣ

8. ದೇಶಭಕ್ತಿಯ ಭಾವನೆಯನ್ನು ಪಸರಿಸಿರುವ ಲೇಖನವಾದ ನಿಬಂಧ್‌ಮಾಲಾವನ್ನು ಯಾವ ಭಾಷೆಯಲ್ಲಿ ಬರೆಯಲಾಗಿತ್ತು ?
A) ಉರ್ದು
B) ಮರಾಠಿ
C) ಬೆಂಗಾಲಿ
D) ಹಿಂದಿ

9. ಪಶ್ಚಿಮ ಘಟ್ಟಗಳಲ್ಲಿ ಕಂಡುಹಿಡಿಯಲ್ಪಟ್ಟ ಕಪ್ಪೆಯ ಒಂದು ಹೊಸ ಜಾತಿ ಯಾವುದು ?
A) ಸ್ಪೇಡ್‌ಫುಟ್ ಕಪ್ಪೆಗಳು
B) ಮಿನೆರ್‌ವರ್ಯ್ಯ ಕಪ್ಪೆಗಳು
C) ಗೋಲಿಯಾತ್ ಕಪ್ಪೆಗಳು
D) ಟೆಕ್ಸಾಸ್ ಕಪ್ಪೆಗಳು

10. ಭಾರತದ ಪ್ರಥಮ ಧಾನ್ಯಕಾಳುಗಳ ಎಟಿಎಮ್ ಎಲ್ಲಿದೆ ?
A) ಮುಂಬೈ
B) ಬೆಂಗಾಲ್
C) ಗುರುಗ್ರಾಮ್
D) ತಿರುವನಂತಪುರಮ್

11. ಸೂರ್ಯನ ಶಕ್ತಿಯು ___________ ಮೂಲಕ ಭೂಮಿಯನ್ನು ತಲುಪುತ್ತದೆ.
A) ಎಡ್ವೆಕ್ಶನ್
B) ವಿಕಿರಣ (ರೇಡಿಯೇಶನ್)
C) ಪ್ರಚಲನೆ (ಕನ್‌ವೆಕ್ಷನ್)
D) ವಹನ (ಕನ್‌ಡೆಕ್ಷನ್)

12. ಅಸಹಕಾರಿ ಚಳುವಳಿಯ ಘೋಷಿತ ಕಾರ್ಯಸೂಚಿಗಳು/ಮನೋಭಾವನೆಗಳ ಭಾಗ ಈ ಕೆಳಗಿನವುಗಳಲ್ಲಿ ಯಾವುದು ಆಗಿಲ್ಲ ?
A) ತೆರಿಗೆಯನ್ನು ಕಟ್ಟದಿರುವುದು
B) ಚುನಾವಣೆಯನ್ನು ಬಹಿಷ್ಕರಿಸುವುದು
C) ಕೃಷಿ ಭೂಮಿಯಿಂದ ದೂರವಿದ್ದು ಬಿಡುವುದು
D) ಬ್ರಿಟಿಷರಿಂದ ಪಡೆದ ಮಾನ್ಯತೆಗಳನ್ನು ಹಿಂದಿರುಗಿಸುವುದು

13. ಒಂದು ದೇಶದ ಕೇಂದ್ರ ಬ್ಯಾಂಕ್ ತನ್ನ ದೇಶದ ಕರೆನ್ಸಿಯ ಮೌಲ್ಯವನ್ನು ನಿಗದಿಸುವುದನ್ನು ________ ಎಂದು ಕರೆಯುತ್ತಾರೆ.
A) ಸ್ಥಿರ ವಿನಿಮಯ ದರ ವ್ಯವಸ್ಥೆ
B) ಚರ ವಿನಿಮಯ ದರ ವ್ಯವಸ್ಥೆ
C) ನಿರ್ವಹಿತ ಚರ
D) ಮೇಲಿನ ಯಾವುದೂ ಅಲ್ಲ

14. ಯಾವ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳು ಸ್ಥಾಪನೆಗೊಂಡವು ?
A) ಪ್ರಥಮ ಪಂಚವಾರ್ಷಿಕ ಯೋಜನೆ
B) ಎರಡನೆಯ ಪಂಚವಾರ್ಷಿಕ ಯೋಜನೆ
C) ಮೂರನೆಯ ಪಂಚವಾರ್ಷಿಕ ಯೋಜನೆ
D) ನಾಲ್ಕನೆಯ ಪಂಚವಾರ್ಷಿಕ ಯೋಜನೆ

15. ಈ ಕೆಳಗಿನ ರಾಜ್ಯಗಳಲ್ಲಿ ಬಾಕ್ಸೈಟ್‌ನ್ನು ಗರಿಷ್ಠ ಪ್ರಮಾಣದಲ್ಲಿ ಉತ್ಪಾದಿಸುವ ರಾಜ್ಯ ಯಾವುದು ?
A) ಒಡಿಶಾ
B) ಝಾರ್ಖಂಡ್
C) ಗುಜರಾತ್
D) ಬಿಹಾರ್

16. ಡಬ್ಲ್ಯೂಟಿಓ (ವಿಶ್ವ ವಾಣಿಜ್ಯ ವ್ಯಾಪಾರ ಸಂಸ್ಥೆ)ಯು ಯಾವ ಇಸವಿಯಲ್ಲಿ ಸ್ಥಾಪನೆಗೊಂಡಿತು ?
A) 1944
B) 1948
C) 1995
D) 1998

17. ಈ ಕೆಳಗಿನವುಗಳಲ್ಲಿ ಸ್ವ-ಉದ್ಯೋಗ ಯೋಜನೆ ಯಾವುದು ?
A) ಆಮ್ ಆದ್ಮಿ ಬೀಮಾ ಯೋಜನೆ
B) ಪ್ರಧಾನ್‌ಮಂತ್ರಿ ಗ್ರಾಮ್ ಸಡಕ್ ಯೋಜನೆ
C) ಪ್ರಧಾನ್‌ಮಂತ್ರಿ ಗ್ರಾಮೋದಯ ಯೋಜನೆ
D) ಸ್ವರ್ಣ ಜಯಂತಿ ಗ್ರಾಮ್ ಸ್ವರೋಜ್ಗಾರ್ ಯೋಜನೆ

18. NITI ಆಯೋಗದ ಪ್ರಸ್ತುತ ಉಪಾಧ್ಯಕ್ಷರು ಯಾರು ?
A) ಸಿಂಧುಶ್ರೀ ಖುಲ್ಲರ್
B) ರಾಜೀವ್ ಕುಮಾರ್
C) ನರೇಂದ್ರ ಮೋದಿ
D) ಅರವಿಂದ್ ಪಣಗರಿಯ

19. 2019-2020 ಇಸವಿಯಲ್ಲಿ ಭಾರತ ದೇಶದಲ್ಲಿ ತೆರಿಗೆಗೆ ಸೇರ್ಪಡೆಯಾದ ಒಟ್ಟು ಮೊತ್ತದಲ್ಲಿ (Gross Value added)(%) ಕೃಷಿ ವಿಭಾಗದ ಕೊಡುಗೆ

A) 24% B) 12% C) 27% D) 18%

20. ಭಾರತೀಯ ಸಂವಿಧಾನದ ಆರ್ಟಿಕಲ್ 25 ರಿಂದ 28 ಯಾವ ಮೂಲಭೂತ ಹಕ್ಕುಗಳ ಕುರಿತು ಪ್ರತಿಪಾದಿಸುತ್ತದೆ ?

A) ಧಾರ್ಮಿಕ ಸ್ವಾತಂತ್ರ್ಯದ ಹಕ್ಕು

B) ಸಮಾನತೆಯ ಹಕ್ಕು

C) ಸಂವಿಧಾನಾತ್ಮಕ ಪರಿಹಾರಾತ್ಮಕ ಹಕ್ಕುಗಳು

D) ಸಂಪ್ರದಾಯಿಕ ಮತ್ತು ಶೈಕ್ಷಣಿಕ ಹಕ್ಕುಗಳು

21. ರಾಜ್ಯ ಚುನಾವಣಾ ಆಯುಕ್ತರ ನೇಮಕಾತಿಯ ಕುರಿತು ಕೆಳಗಿರುವ ಹೇಳಿಕೆಗಳಲ್ಲಿ ಸರಿಯಾದದ್ದು ಯಾವುದು ?

1) ರಾಜ್ಯ ಚುನಾವಣಾ ಆಯುಕ್ತರನ್ನು ರಾಜ್ಯಪಾಲ ನೇಮಿಸುತ್ತಾರೆ.

2) ರಾಜ್ಯ ಚುನಾವಣಾ ಆಯುಕ್ತರನ್ನು ರಾಷ್ಟ್ರಪತಿ ನೇಮಿಸುತ್ತಾರೆ.

3) ಅವರ ಅಧಿಕಾರ ಅವಧಿಯು 5 ವರ್ಷಗಳು ಅಥವಾ 65 ವರ್ಷ ವಯಸ್ಸಿನವರೆಗೆ ಇರುತ್ತದೆ.

4) ರಾಜ್ಯ ಚುನಾವಣಾ ಆಯುಕ್ತರನ್ನು ಭಾರತೀಯ ಸಂವಿಧಾನದ ಆರ್ಟಿಕಲ್ 243 ಕೆ ಪ್ರಕಾರ ನೇಮಿಸಲಾಗುತ್ತದೆ.

A) 2, 3 B) 1, 3, 4 C) 2, 3, 4 D) 2, 4

22. ಕೇರಳ ಕೃಷಿ ವಿಭಾಗದ ಕೇರಳ ಕೀಟ ನಿರ್ವಹಣೆಯ ಕೇಂದ್ರವು ಎಲ್ಲಿದೆ ?

A) ಕಣ್ಣೂರ್ B) ಅಲಪ್ಪುಳ C) ತ್ರಿಶೂರ್ D) ಕೊಲ್ಲಮ್

23. ಈ ಕೆಳಗಿನವುಗಳಲ್ಲಿ ಸಂವಿಧಾನದ ಸಂಸ್ಥೆ ಯಾವುದು ಆಗಿರುವುದಿಲ್ಲ?

1) ಕೇರಳ ಸಾರ್ವಜನಿಕ ಸೇವಾ ಸಮಿತಿ

2) ರಾಜ್ಯ ಹಣಕಾಸು ಸಮಿತಿ

3) ರಾಜ್ಯ ಮಾನವ ಹಕ್ಕುಗಳ ಸಮಿತಿ

4) ರಾಜ್ಯ ಮಾಹಿತಿ ಸಮಿತಿ

A) 2 ಮತ್ತು 3 B) 1 ಮತ್ತು 2 C) 3 ಮತ್ತು 4 D) 1 ಮತ್ತು 4

24. ಕೇರಳದಲ್ಲಿ ಸಾಮಾಜಿಕ ನ್ಯಾಯದ ಸ್ವಾಧೀನತೆಯನ್ನು ಹೊಂದಿರುವ ಪ್ರಸ್ತುತ ಮಂತ್ರಿ ಯಾರು ?

A) ಶ್ರೀಮತಿ ಚಿಂಜು ರಾಣಿ B) ಶ್ರೀಮತಿ ವೀಣಾ ಜಾರ್ಜ್

C) ಶ್ರೀಮತಿ ಆರ್. ಬಿಂದು D) ಶ್ರೀ ಕೆ. ರಾಜನ್

25. ಕೇರಳದ ಪೌರಸಭೆಯ ನಿಗಮದಲ್ಲಿ ಪ್ರಸ್ತುತ ಇರುವ ಮಹಿಳಾ ಮೇಯರ್‌ಗಳ ಒಟ್ಟು ಸಂಖ್ಯೆ ಎಷ್ಟು?

A) 5 B) 6 C) 4 D) 3

26. ಭಾರತದ ರಾಜ್ಯಗಳ ರಾಜ್ಯಪಾಲರ ನೇಮಕಾತಿಗೆ ಅಗತ್ಯವಿರುವ ಅರ್ಹತೆಗಳನ್ನು ಸೂಚಿಸುವ ಸಂವಿಧಾನದ ಆರ್ಟಿಕಲ್

A) 158 B) 157 C) 156 D) 155

27. ಭಾರತದ ಸಾರ್ವತ್ರಿಕ ವಯಸ್ಕ ಮತದಾನದ ಕುರಿತು ಕೆಳಗಿರುವ ಹೇಳಿಕೆಗಳಲ್ಲಿ ಸರಿಯಾದದ್ದು ಯಾವುದು ?

1. ಸಾರ್ವತ್ರಿಕ ವಯಸ್ಕ ಮತದಾನ ಭಾರತದ ಸಂವಿಧಾನದ ಪರಿಚಯಿಸುವಿಕೆಯ ದಿನವಾದ ಜನವರಿ 26, 1950ರಿಂದಲೇ ಅಸ್ತಿತ್ವದಲ್ಲಿದೆ.
2. ಸಂವಿಧಾನದ ಆರ್ಟಿಕಲ್ 327 ಸಾರ್ವತ್ರಿಕ ವಯಸ್ಕ ಮತದಾನವನ್ನು ನಿಖರವಾಗಿಸಿದೆ.
3. ಭಾರತ ಸಂವಿಧಾನದ 61ನೆಯ ತಿದ್ದುಪಡಿಯು 1989ರಲ್ಲಿ ಮತಚಲಾವಣೆಯ ವಯಸ್ಸನ್ನು 21ರಿಂದ 18 ವರ್ಷಕ್ಕೆ ಇಳಿಸಿದೆ.
4. ಸಾರ್ವತ್ರಿಕ ವಯಸ್ಕ ಮತದಾನದ ಪ್ರಕಾರ ಎಲ್ಲಾ ಹಿರಿಯ ನಾಗರಿಕರು ಜಾತಿ-ಧರ್ಮ-ಜನಾಂಗೀಯತೆ-ಭಾಷೆ-ಲಿಂಗ-ಸ್ಥಳಗಳ ಭೇದವಿಲ್ಲದೇ ಮತವನ್ನು ಚಲಾಯಿಸಬಹುದು.

A) 1, 2, 4 B) 2, 3, 4 C) 3, 4 D) 1, 3, 4

28. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಪ್ರಸ್ತುತ ಅಧ್ಯಕ್ಷರು ಯಾರು ?

A) ಎಚ್. ಎಲ್. ದತ್ತು
B) ರೇಖಾ ಶರ್ಮಾ
C) ವಿಜಯ್ ಸಬಾಲ
D) ಅರುಣ್ ಕುಮಾರ್ ಮಿಶ್ರ

29. ಆ್ಯಂಟಿ-ಡಿಫೆಕ್ಶನ್ ಕಾನೂನಿನ ಪ್ರಕಾರ ಈ ಕೆಳಗಿರುವ ಹೇಳಿಕೆಗಳಲ್ಲಿ ಸರಿಯಾದದ್ದು ಯಾವುದು ?

1. ಸಂವಿಧಾನದ 52ನೆಯ ತಿದ್ದುಪಡಿಯಾದಾಗಿನಿಂದ ಇದು ಅಸ್ತಿತ್ವಕ್ಕೆ ಬಂದಿತು.
2. 1990ರಲ್ಲಿ ಅಸ್ತಿತ್ವಕ್ಕೆ ಬಂದಿತು.
3. ಸಂವಿಧಾನದ 10ನೆಯ ಶೆಡ್ಯೂಲ್‌ನಲ್ಲಿ ಇದನ್ನು ಸೇರಿಸಲಾಗಿದೆ.
4. ಸಂವಿಧಾನದ 107ನೆಯ ತಿದ್ದುಪಡಿಯಲ್ಲಿ ಆ್ಯಂಟಿ ಡಿಫೆಕ್ಶನ್ ಕಾನೂನನ್ನು ಸೂಚಿಸಲಾಗಿದೆ.

A) 1, 3
B) 1, 2, 3
C) 1, 3, 4
D) 2, 3, 4

30. ಈ ಕೆಳಗಿನವುಗಳಲ್ಲಿ ಸರಿಯಾದ ಜೋಡಿ ಯಾವುದು ಆಗಿರುವುದಿಲ್ಲ ?

1. ಡಾ. ಬಿ. ಆರ್. ಅಂಬೇಡ್ಕರ್ – ಭಾರತೀಯ ಸಂವಿಧಾನ ರಚನಾ ಕರಡು ಸಮಿತಿಯ ಅಧ್ಯಕ್ಷರು.
2. ಜವಾಹರ್‌ಲಾಲ್ ನೆಹರೂ – ಸಂವಿಧಾನ ರಚನಾ ಕರಡು ಸಮಿತಿಯ ತಾತ್ಕಾಲಿಕ ಅಧ್ಯಕ್ಷರು.
3. ಡಾ. ರಾಜೇಂದ್ರ ಪ್ರಸಾದ್ – ಸಂವಿಧಾನ ರಚನಾ ಕರಡು ಸಮಿತಿಯ ಅಧ್ಯಕ್ಷರು.
4. ಸಚ್ಚಿದಾನಂದ ಸಿಂಹ – ಸಂವಿಧಾನದ ಪ್ರಸ್ತಾವನೆಯನ್ನು ತಯಾರಿಸಿದವರು.

A) 3 ಮತ್ತು 4
B) 1 ಮತ್ತು 4
C) 2 ಮತ್ತು 4
D) 1 ಮತ್ತು 2

31. ಕೇರಳದ ಸಾಮಾಜಿಕ ನ್ಯಾಯ ವಿಭಾಗದಡಿಯಲ್ಲಿ ಆಶಾ ಭವನದ ಕಾರ್ಯನಿರ್ವಹಣೆಯ ಕುರಿತು ಕೆಳಗೆ ಇರುವ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ ಯಾವುದು ?
 1. ಗುಣಮುಖರಾದ ಮಾನಸಿಕ ಅನಾರೋಗ್ಯವುಳ್ಳ ರೋಗಿಗಳಿಗೆ ಪುನರ್ವಸತಿ ಕೇಂದ್ರ.
 2. ದಿನದಲ್ಲಿ ಹಿರಿಯರ ಆರೈಕೆ ಮಾಡುವುದು.
 3. ವಯಸ್ಸಾದವರು ಮತ್ತು ವಿಭಿನ್ನ ಸಾಮರ್ಥ್ಯವುಳ್ಳವರ ರಕ್ಷಣಾ ಕೇಂದ್ರ.
 4. ವಿಭಿನ್ನ ಸಾಮರ್ಥ್ಯವುಳ್ಳ ವ್ಯಕ್ತಿಗಳನ್ನು ಸಂರಕ್ಷಿಸುವ ಕೇಂದ್ರ.

A) 1, 4 B) 3 C) 1 D) 2, 3

32. ಪೌರತ್ವದ ಕುರಿತು ಉಲ್ಲೇಖಿಸುವ ಭಾರತೀಯ ಸಂವಿಧಾನದ ಆರ್ಟಿಕಲ್ ಯಾವುದು ?

A) 12 ರಿಂದ 18 B) 5 ರಿಂದ 11
C) 1ರಿಂದ 4 D) ಮೇಲಿನ ಯಾವುದೂ ಅಲ್ಲ

33. ಈ ಕೆಳಗಿನವರಲ್ಲಿ ಕೇರಳದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸದಸ್ಯರು ಯಾರು ಆಗಿಲ್ಲ ?
 1. ಮುಖ್ಯಮಂತ್ರಿ 2. ಆದಾಯ ಇಲಾಖೆಯ ಮಂತ್ರಿ
 3. ಆರೋಗ್ಯ ಇಲಾಖೆಯ ಮಂತ್ರಿ 4. ಕೃಷಿ ಇಲಾಖೆಯ ಮಂತ್ರಿ

A) 2, 4 B) 4 C) 3, 4 D) 3

34. ವಾಕ್ಯುಓಲ್‌ನ್ನು ಆವರಿಸಿರುವ ವಿಶೇಷ ಪದರವನ್ನು __________ ಎಂದು ಕರೆಯುತ್ತಾರೆ.

A) ಕ್ರೋಮೋಪ್ಲಾಸ್ಟ್ B) ವಾಕ್ಯುಓಲ್ ಪದರ
C) ಕ್ಲೋರೋಪ್ಲಾಸ್ಟ್ D) ಟೋನೋಪ್ಲಾಸ್ಟ್

35. ಈ ಕೆಳಗಿನವುಗಳಲ್ಲಿ ಜೀರ್ಣಕ್ರಿಯೆಗೆ ಸಹಕಾರಿಯಾಗದ ಪೋಷಕಾಂಶ ಯಾವುದು ?

A) ಪ್ರೋಟಿನ್ B) ಕೊಬ್ಬು
C) ಮಿನರಲ್‌ಗಳು D) ಧಾನ್ಯಕಾಳುಗಳು

36. ಈ ಕೆಳಗಿನ ವಾಕ್ಯಗಳಿಂದ ಸರಿಯಾದವನ್ನು ಆಯ್ಕೆ ಮಾಡಿ.
 1. ಮೈಟಾಸಿಸ್ ಕ್ರಿಯೆಯಲ್ಲಿ ಪೋಷಕ ಜೀವಕೋಶವು ಎರಡು ಹೆಣ್ಣು ಜೀವಕೋಶಗಳಾಗಿ ಇಬ್ಭಾಗವಾಗುತ್ತದೆ.
 2. ಮೈಟಾಸಿಸ್ ಕ್ರಿಯೆಯು ದೇಹದ ಜೀವಕೋಶಗಳಲ್ಲಿ ನಡೆಯುತ್ತದೆ.
 3. ಮಿಯಾಸಿಸ್ ಕ್ರಿಯೆಯಲ್ಲಿ ಪೋಷಕ ಜೀವಕೋಶವು ಎರಡು ಹೆಣ್ಣು ಜೀವಕೋಶಗಳಾಗಿ ಇಬ್ಭಾಗವಾಗುತ್ತದೆ.
 4. ಮಿಯಾಸಿಸ್ ಕ್ರಿಯೆಯು ವೀರ್ಯದ ಬೀಜಕೋಶದಲ್ಲಿ ಸಂಭವಿಸುತ್ತದೆ.

A) 1, 2, 3, 4 ಸರಿಯಾಗಿದೆ B) 1, 2, 3 ಸರಿಯಾಗಿದೆ
C) 2, 3, 4 ಸರಿಯಾಗಿದೆ D) 1, 2, 4 ಸರಿಯಾಗಿದೆ

37. ಕೇರಳ ಸರಕಾರದ DISHAದ ಸಹಾಯವಾಣಿ

A) 1066 B) 1076 C) 1058 D) 1056

38. KASP ವಿಸ್ತರಿಸಿ ಬರೆಯಿರಿ.
A) ಕೇರಳ ಆರೋಗ್ಯ ಸುರಕ್ಷಾ ಪದ್ಧತಿ
B) ಕಾರುಣ್ಯ ಆರೋಗ್ಯ ಸುರಕ್ಷಾ ಪದ್ಧತಿ
C) ಕೇರಳ ಆರೋಗ್ಯ ಸೇವನ ಪದ್ಧತಿ
D) ಕಾರುಣ್ಯ ಆರೋಗ್ಯ ಸೇವನ ಪದ್ಧತಿ

39. ಪಾಪ್ ಸ್ಮಿಯರ್ ಪರೀಕ್ಷೆಯ ಮೂಲಕ ಯಾವ ವಿಧದ ಕ್ಯಾನ್ಸರ್‌ನ ರೋಗ ನಿರ್ಣಯ ಮಾಡಲಾಗುತ್ತದೆ ?
A) ಶ್ವಾಸಕೋಶದ ಕ್ಯಾನ್ಸರ್
B) ಸ್ತನದ ಕ್ಯಾನ್ಸರ್
C) ಸರ್ವಿಕಲ್ ಕ್ಯಾನ್ಸರ್
D) ಬಾಯಿಯ ಕ್ಯಾನ್ಸರ್

40. ವಿಶನ್ 2020ಕ್ಕೆ ಸಂಬಂಧಿಸಿದ ಅಸ್ವಸ್ಥತೆ ಈ ಕೆಳಗಿನವುಗಳಲ್ಲಿ ಯಾವುದು ?
A) ಅಂಧತ್ವ
B) ಕಿವುಡುತನ
C) ಮಾನಸಿಕ ಅಸ್ವಸ್ಥತೆ
D) ಕೋವಿಡ್ – 19

41. ಮಲೇರಿಯಾವನ್ನುಂಟು ಮಾಡುವ ಸೂಕ್ಷ್ಮಜೀವಿ ಯಾವುದು ?
A) ವೈರಸ್
B) ಬ್ಯಾಕ್ಟೀರಿಯಾ
C) ಪ್ರೊಟೋಜೋವಾ
D) ಅಮೀಬಾ

42. ಲೋಹಗಳ ಪ್ರತಿಕ್ರಿಯಾತ್ಮಕತೆಯ ಕುರಿತು ಈ ಕೆಳಗಿನವುಗಳಲ್ಲಿ ಯಾವ ವಾಕ್ಯ ಸರಿಯಾಗಿಲ್ಲ ?
A) ಪ್ರತಿಕ್ರಿಯಾತ್ಮಕತೆಯ ಶ್ರೇಣಿಯಲ್ಲಿ ಮೇಲಿನಿಂದ ಕೆಳಗೆ ಇಳಿದಂತೆ ಲೋಹಗಳ ಪ್ರತಿಕ್ರಿಯಾತ್ಮಕತೆಯು ಹೆಚ್ಚುತ್ತದೆ.
B) ಪ್ರತಿಕ್ರಿಯಾತ್ಮಕತೆ ಶ್ರೇಣಿಯಲ್ಲಿ ಉನ್ನತದಲ್ಲಿರುವ ಲೋಹಗಳು ಪ್ರತಿಕ್ರಿಯಾತ್ಮಕತೆ ಶ್ರೇಣಿಯಲ್ಲಿ ಕೆಳಮಟ್ಟದಲ್ಲಿರುವ ಲೋಹಗಳನ್ನು ತಮ್ಮ ದ್ರವ್ಯದಿಂದ ಸ್ಥಳಾಂತರಿಸಬಲ್ಲವು.
C) ಪ್ರತಿಕ್ರಿಯಾತ್ಮಕತೆಯ ಶ್ರೇಣಿಯಲ್ಲಿ ಹೈಡ್ರೋಜನ್‌ಗಿಂತ ಮೇಲಿರುವ ಲೋಹಗಳೆಲ್ಲವೂ ತೆಳುವಾದ ಆಸಿಡ್‌ನಿಂದ ಹೈಡ್ರೋಜನ್‌ನನ್ನು ಸ್ಥಳಾಂತರಿಸಬಲ್ಲವು.
D) ಪ್ರತಿಕ್ರಿಯಾತ್ಮಕತೆಯ ಶ್ರೇಣಿಯಲ್ಲಿ ಹೈಡ್ರೋಜನ್‌ಗಿಂತ ಕೆಳಗೆ ಕಾಣುವ ಲೋಹಗಳು ತೆಳುವಾದ ಆ್ಯಸಿಡ್‌ಗಳೊಂದಿಗೆ ಪ್ರತಿಕ್ರಿಯಿಸುವುದಿಲ್ಲ.

43. ವಜ್ರಗಳ ಕುರಿತು ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದದ್ದು ಯಾವುದು ?
1. ವಜ್ರವು ಕಾರ್ಬನ್‌ನ ಅತೀ ಕಠಿಣ ಸ್ವರೂಪವಾಗಿದೆ.
2. ವಜ್ರವು ವಿದ್ಯುತ್ ನಿರ್ವಾಹಕವಾಗಿದೆ.
3. ವಜ್ರವು ಉನ್ನತ ಮಟ್ಟದ ಉಷ್ಣ ವಿದ್ಯುತ್ ನಿರ್ವಾಹಕ ಗುಣವನ್ನು ಹೊಂದಿದೆ.
4. ವಜ್ರವು ಕಡಿಮೆ ಮಟ್ಟದ ಅಲೆಬಾಗಿಕೆ ಸೂಚ್ಯಂಕವನ್ನು ಹೊಂದಿದೆ.

A) 1 ಮತ್ತು 2
B) 1 ಮತ್ತು 3
C) 2 ಮತ್ತು 3
D) 2 ಮತ್ತು 4

44. ಪೀರಿಯಾಡಿಕ್ ಟೇಬಲ್ ಮತ್ತು ಇಲೆಕ್ಟ್ರಾನಿಕ್ ಕಾನ್ಫಿಗರೇಶನ್‌ಗಳ ಕುರಿತು ಈ ಕೆಳಗಿನವುಗಳಲ್ಲಿ ಸರಿಯಾದ ಹೇಳಿಕೆಗಳು ಯಾವುವು ?
1. ಡಿ-ಸಬ್‌ಶೆಲ್ ಗರಿಷ್ಠ 10 ಇಲೆಕ್ಟ್ರಾನ್‌ಗಳನ್ನು ಹಿಡಿದಿಟ್ಟುಕೊಳ್ಳಬಲ್ಲದು.
2. ಎಸ್-ಬ್ಲಾಕ್‌ನ ಎಲ್ಲಾ ಎಲಿಮೆಂಟ್‌ಗಳು ಲೋಹಗಳು.
3. ಡಿ-ಬ್ಲಾಕ್‌ನ ಎಲ್ಲಾ ಎಲಿಮೆಂಟ್‌ಗಳನ್ನು ಟ್ರಾನ್ಸಿಶನಲ್ ಎಲಿಮೆಂಟ್‌ಗಳೆಂದು ಕರೆಯುತ್ತಾರೆ.
4. ನ್ಯೂಕ್ಲಿಯಸ್‌ನಿಂದ ದೂರ ಹೆಚ್ಚಿದಂತೆ ಇಲೆಕ್ಟ್ರಾನ್‌ನ ಶಕ್ತಿಯು ಕಡಿಮೆಯಾಗುತ್ತದೆ.

A) 2 ಮತ್ತು 3
B) 1 ಮತ್ತು 2
C) 1 ಮತ್ತು 3
D) 2 ಮತ್ತು 4

45. 2020ರ ರಸಾಯನಶಾಸ್ತ್ರದ ನೋಬೆಲ್ ಪ್ರಶಸ್ತಿಯನ್ನು ಇಮಾನ್ಯುಯಲ್ ಚಾರ್ಪೆಂಟ್ಯೆ ಮತ್ತು ಜೆನಿಫರ್ ಎ. ಡೌಡ್ನರೆಂಬ ಇಬ್ಬರು ಮಹಿಳೆಯರಿಗೆ ನೀಡಲಾಯಿತು. ಯಾವ ಶೋಧನೆಗಾಗಿ ಅವರಿಗೆ ಈ ಪ್ರಶಸ್ತಿಯನ್ನು ನೀಡಲಾಯಿತು ?

A) ಲೀಥಿಯಮ್ ಐರನ್ ಬ್ಯಾಟರಿಯ ಅಭಿವೃದ್ಧಿ

B) CRISPR/Cas9, ಜೀವವಾಹಿನಿಯನ್ನು ತಿದ್ದುವ ತಂತ್ರಜ್ಞಾನದ ಅಭಿವೃದ್ಧಿ

C) ಬ್ಯಾಕ್ಟೀರಿಯೋಫೇಗಸ್ ಮತ್ತು ಎನ್ಜೈಮ್‌ಗಳ ವಿಕಸನದ ವಿಷಯದಲ್ಲಿ ಸಂಶೋಧನೆಯನ್ನು ನಡೆಸಿದ್ದರಿಂದ

D) ಮೇಲಿನ ಯಾವುದೂ ಅಲ್ಲ

46. ಒಂದು ದೇಶದ ವಿಜ್ಞಾನಿಗಳು AM III ಎಂಬ ವಜ್ರದಷ್ಟು ಗಟ್ಟಿಯಾಗಿರುವ ಗಾಜಿನಂತಹ ವಸ್ತುವೊಂದನ್ನು ಅಭಿವೃದ್ಧಿಪಡಿಸಿರುವ ದೇಶ

A) ಭಾರತ
B) ಫ್ರಾನ್ಸ್
C) ಬ್ರಿಟನ್
D) ಚೀನಾ

47. ಮನುಷ್ಯನ ಶ್ರವಣ ಶಕ್ತಿಗಿಂತ ಕಡಿಮೆ ಫ್ರೀಕ್ವೆನ್ಸಿವುಳ್ಳ ಶಬ್ದಗಳನ್ನು ಕೇಳಿಸಿಕೊಳ್ಳುವ ಸಾಮರ್ಥ್ಯ ಯಾವುದಕ್ಕಿದೆ ?

1. ನಾಯಿ
2. ಪಾರಿವಾಳ
3. ಆನೆ
4. ಬಾವಲಿ

A) 2 ಮತ್ತು 4
B) 2 ಮತ್ತು 3
C) 2, 3 ಮತ್ತು 4
D) 1 ಮತ್ತು 4

48. ಒಂದು ವಸ್ತುವಿನ ತಾಪಮಾನಕ್ಕೆ ಸಂಬಂಧಿಸಿದ ಕೆಲವು ವಾಕ್ಯಗಳು ಕೆಳಗಿವೆ. ಇವುಗಳಲ್ಲಿ ಸರಿಯಾದದ್ದು ಯಾವುದು ?

1. ಒಂದು ವಸ್ತುವಿನ ಮಾಲಿಕ್ಯೂಲ್‌ಗಳ ಚಲನಶಕ್ತಿಯ ಸಮಗ್ರ ಮೊತ್ತವೇ ಆ ವಸ್ತುವಿನ ತಾಪಮಾನ.
2. ಒಂದು ವಸ್ತುವಿನಲ್ಲಿರುವ ಮಾಲಿಕ್ಯೂಲ್‌ಗಳ ಸರಾಸರಿ ಚಲನಶಕ್ತಿಯ ಅನುಪಾತವೇ ಆ ವಸ್ತುವಿನ ತಾಪಮಾನ.
3. ತಾಪಮಾನದ ಎಸ್ ಐ ಯೂನಿಟ್ ಜೂಲ್.
4. ತಾಪಮಾನದಲ್ಲಿರುವ ವ್ಯತ್ಯಾಸದಿಂದಲೇ ಉಷ್ಣತೆಯ ಶಕ್ತಿಯು ಒಂದು ಕಡೆಯಿಂದ ಇನ್ನೊಂದೆಡೆಗೆ ಚಲಿಸುತ್ತದೆ.

A) 1 ಮತ್ತು 4
B) 2, 3 ಮತ್ತು 4
C) 1, 3 ಮತ್ತು 4
D) 2 ಮತ್ತು 4

49. ಒಂದು ರಿವ್ಯೂ ಕನ್ನಡಿಯೊಂದರ ವಕ್ರತೆಯ ತ್ರಿಜ್ಯವು 12 ಮೀಟರ್‌ಗಳಾಗಿದ್ದರೆ ಆದರ ಕೇಂದ್ರಬಿಂದುವಿನ ದೂರವೆಷ್ಟು ?

A) 6 ಮೀಟರ್
B) 24 ಮೀಟರ್
C) 3 ಮೀಟರ್
D) 9 ಮೀಟರ್

50. 2021 ಆಮೆಜಾನ್ ಪೋಲಾರ್ ಸ್ಯಾಟಲೈಟ್ ಲಾಂಚ್ ವಾಹನ (PSLV-C51) ಆಮೆಝೋನೀಯಾ 1 ಯಾವ ದೇಶದ ಉಪಗ್ರಹವಾಗಿದೆ ?

A) ಕೆನಡಾ
B) ಬ್ರಿಟನ್
C) ಬ್ರೆಜಿಲ್
D) ಫ್ರಾನ್ಸ್

51. 2020 ರಲ್ಲಿ ಭೌತಶಾಸ್ತ್ರ ವಿಭಾಗದ ನೋಬೆಲ್ ಪ್ರಶಸ್ತಿಗೆ ಮೂವರನ್ನು ನೇಮಿಸಲಾಗಿದೆ. ಅವರಲ್ಲಿ ಒಬ್ಬರಾದ ರೋಜರ್ ಪೆನ್ರೋಸ್‌ರವರ ಯಾವ ಆವಿಷ್ಕಾರವು ಅವರಿಗೆ ಈ ಅರ್ಹತೆಯನ್ನು ನೀಡಿತು ?

A) ಬ್ಲಾಕ್ ರಂಧ್ರಗಳ ರಚನೆಯಲ್ಲಿ ಸಹಕಾರಿಯಾಗುವ ಸಾಪೇಕ್ಷತಾ ಸಿದ್ಧಾಂತವನ್ನು ಒದಗಿಸಿದ್ದರಿಂದ

B) ಬ್ರಹ್ಮಾಂಡದ ಕೇಂದ್ರದಲ್ಲಿರುವ ನಕ್ಷತ್ರಗಳ ಕಕ್ಷೆಗಳನ್ನು ನಿಯಂತ್ರಿಸುವ ಅದೃಶ್ಯವಾದ ಬಹಳ ಬೃಹತ್‌ಗಾತ್ರದ ಬ್ಲಾಕ್ ರಂಧ್ರಗಳನ್ನು ಗುರುತಿಸಿದ್ದು

C) ಲೇಸರ್ ಭೌತಶಾಸ್ತ್ರದ ಆವಿಷ್ಕಾರಕ್ಕೆ

D) ಮೇಲಿನ ಯಾವುದೂ ಅಲ್ಲ

52. ಕೇರಳ ಕಲಾಮಂಡಲಮ್‌ನಿಂದ ತುಲ್ಲಲ್ ಕಲಾ ಪ್ರಕಾರವನ್ನು ಕಲಿತ ಪ್ರಥಮ ಮಹಿಳೆ

A) ಕಲಾಮಂಡಲಮ್ ಪದ್ಮಾವತಿ
B) ಕಲಾಮಂಡಲಮ್ ರೇವತಿ
C) ಕಲಾಮಂಡಲಮ್ ಪದ್ಮ
D) ಕಲಾಮಂಡಲಮ್ ದೇವಕಿ

53. ಆಗಸ್ಟ್ 2021ರಲ್ಲಿ ಭಾರತದ ಪುರುಷರ ಫುಟ್‌ಬಾಲ್ ತಂಡದ ಸ್ಥಾನ ಯಾವುದಾಗಿತ್ತು ?

A) 102
B) 92
C) 113
D) 105

54. ದ್ರೋಣಾಚಾರ್ಯ ಪ್ರಶಸ್ತಿಯ ಕುರಿತು ಈ ಕೆಳಗಿನವುಗಳಲ್ಲಿ ಯಾವ ಹೇಳಿಕೆಯು ಸರಿಯಾಗಿಲ್ಲ ?

A) ಒ.ಎಮ್. ನಂಬಿಯಾರ್ 1985ರಲ್ಲಿ ದ್ರೋಣಾಚಾರ್ಯ ಪ್ರಶಸ್ತಿಯನ್ನು ಪಡೆದಿದ್ದರು.

B) ರಮಾಕಾಂತ್ ಅಚ್ರೇಕರ್ ಕ್ರಿಕೆಟ್‌ನಲ್ಲಿ ದ್ರೋಣಾಚಾರ್ಯ ಪ್ರಶಸ್ತಿಯನ್ನು ಪಡೆದ ಮೊದಲಿಗರು.

C) ಸಯೆದ್ ನಜೀಮುದ್ದೀನ್ ಫುಟ್‌ಬಾಲ್‌ನಲ್ಲಿ ದ್ರೋಣಾಚಾರ್ಯ ಪ್ರಶಸ್ತಿಯನ್ನು ಪಡೆದ ಮೊದಲಿಗರು.

D) 2000 ಇಸವಿಯಲ್ಲಿ ಹಾಕಿ ಆಟ ಪ್ರಥಮ ದ್ರೋಣಾಚಾರ್ಯ ಪ್ರಶಸ್ತಿಯನ್ನು ಪಡೆದಿತ್ತು.

55. ಮಲಯಾಳಂ ಭಾಷೆಯಲ್ಲಿ ತಿಳಿದುಬಂದ ಪ್ರಥಮ ಎನ್‌ಸೈಕ್ಲೋಪೀಡಿಯಾವನ್ನು ಬರೆದವರು ಯಾರು ?

A) ಜಿ. ಪದ್ಮನಾಭ ಪಿಳ್ಳೈ
B) ಮ್ಯಾಥ್ಯು ಎಮ್. ಕುಳ್ಳಿವೇಲಿ
C) ಆರ್. ಈಶ್ವರ ಪಿಳ್ಳೈ
D) ವೆಟ್ಟಮ್ ಮಾಣಿ

56. ಓ. ಎನ್. ವಿ. ಕುರುಪ್ ಕುರಿತು ಈ ಕೆಳಗಿನವುಗಳಲ್ಲಿ ಯಾವ ಹೇಳಿಕೆಯು ಸರಿಯಾಗಿಲ್ಲ ?

A) ಅವರು ಜ್ಞಾನಪೀಠ ಪ್ರಶಸ್ತಿಯನ್ನು 2008ರಲ್ಲಿ ಪಡೆದರು.

B) ಅವರು ಪದ್ಮಶ್ರೀ ಪ್ರಶಸ್ತಿಯನ್ನು 1998ರಲ್ಲಿ ಪಡೆದರು.

C) ಅವರು 2011ರಲ್ಲಿ ಪದ್ಮವಿಭೂಷಣ ಪ್ರಶಸ್ತಿಯನ್ನು ಪಡೆದರು.

D) ಎಳುತ್ತಚ್ಚನ್ ಪ್ರಶಸ್ತಿಯನ್ನು 2007ರಲ್ಲಿ ಪಡೆದರು.

57. 2021ರ ಆಸ್ಕರ್ ಪ್ರಶಸ್ತಿಯನ್ನು ಗೆದ್ದ ಸಾಕ್ಷ್ಯಚಿತ್ರ ಯಾವುದು ?

A) ಕಲೆಕ್ಟಿವ್
B) ಟೈಮ್
C) ದಿ ಮೋಲ್ ಏಜೆಂಟ್
D) ಮೈ ಆಕ್ಟೋಪಸ್ ಟೀಚರ್

58. 2020ರ ಟೋಕಿಯೋ ಒಲಿಂಪಿಕ್ಸ್ ಕುರಿತು ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿಯಲ್ಲ ?
A) ಪುರುಷರ ಹಾಕಿಯಲ್ಲಿ ಬೆಲ್ಜಿಯಮ್ ತಂಡವು ಚಿನ್ನದ ಪದಕವನ್ನು ಗೆದ್ದಿತು.
B) ಮಹಿಳೆಯರ ಫುಟ್‌ಬಾಲ್‌ನಲ್ಲಿ ಕೆನೆಡಾ ತಂಡವು ಚಿನ್ನದ ಪದಕವನ್ನು ಗೆದ್ದಿತು.
C) ಪುರುಷರ ವಾಲಿಬಾಲ್‌ನಲ್ಲಿ ಅಮೇರಿಕಾ ತಂಡವು ಚಿನ್ನದ ಪದಕವನ್ನು ಗೆದ್ದಿತು.
D) ಮಹಿಳೆಯರ ಹಾಕಿಯಲ್ಲಿ ನೆದರ್‌ಲ್ಯಾಂಡ್ಸ್ ತಂಡವು ಚಿನ್ನದ ಪದಕವನ್ನು ಗೆದ್ದಿತು.

59. ವೆಬ್‌ಪೇಜ್‌ನ ಕೀ ವರ್ಡ್ಸ್‌ಗಳನ್ನು ಪತ್ತೆಹಚ್ಚಲು ಸರ್ಚ್ ಇಂಜಿನ್ ಬಳಸುವ ಪ್ರೋಗ್ರಾಮ್
A) ಯುಆರ್‌ಎಲ್
B) ಸ್ಪೈಡರ್
C) ಬ್ರೌಸರ್
D) ಫೈರ್‌ವಾಲ್

60. 2000 ಇಸವಿಯ ಐಟಿ ಕಾಯ್ದೆಯ ಯಾವ ವಿಭಾಗವು ಗೌಪ್ಯತೆಯ ಉಲ್ಲಂಘನೆಗೆ ಸಂಬಂಧಿಸಿದೆ ?
A) 66ಬಿ
B) 66ಡಿ
C) 66ಇ
D) 66ಎಫ್

61. ಈ ಕೆಳಗಿನವುಗಳಲ್ಲಿ ನಾನ್ ಇಂಪಾಕ್ಟ್ ಪ್ರಿಂಟರ್ ಯಾವುದು ?
1. ಡಾಟ್ ಮ್ಯಾಟ್ರಿಕ್ಸ್ ಪ್ರಿಂಟರ್
2. ಇಂಕ್‌ಜೆಟ್ ಪ್ರಿಂಟರ್
3. ಲೇಸರ್ ಪ್ರಿಂಟರ್
A) ಕೇವಲ 1
B) ಕೇವಲ 3
C) ಕೇವಲ 1 ಮತ್ತು 2
D) ಕೇವಲ 2 ಮತ್ತು 3

62. ಕೇರಳ ಡಿಜಿಟಲ್ ವಿಶ್ವವಿದ್ಯಾಲಯದ ಪ್ರಥಮ ಉಪ ಕುಲಪತಿ ಯಾರು ?
A) ಡಾ. ಸಜಿ ಗೋಪಿನಾಥ್
B) ಆರಿಫ್ ಮೊಹಮ್ಮದ್ ಖಾನ್
C) ಡಾ. ವಿ. ಪಿ. ಮಹಾದೇವನ್ ಪಿಳ್ಳೈ
D) ಡಾ. ಸಾಬು ಥಾಮಸ್

63. 1ರಿಂದ 12 ರವರೆಗಿನ ತರಗತಿಗಳ ಡಿಜಿಟಲ್ ಶೈಕ್ಷಣಿಕ ಸಂಪನ್ಮೂಲಗಳನ್ನು ಹೊಂದಿರುವ KITE ಪೋರ್ಟಲ್
A) ಸಮೇತಮ್
B) ಸಂಪೂರ್ಣ
C) ಸಮಗ್ರ
D) ಕೂಲ್ (KOOL)

64. ಕೆಳಗಿನ ಹೇಳಿಕೆಗಳಲ್ಲಿ ಕೇಂದ್ರ ಸರಕಾರದ ಗುಪ್ತಚರ ಮತ್ತು ಭದ್ರತಾ ಸಂಸ್ಥೆಯ ಕುರಿತು ಮಾಹಿತಿ ಕಾಯ್ದೆಗೆ ಸಂಬಂಧಿಸಿದ್ದು ಯಾವುದು ?
A) ಮಾಹಿತಿ ಪಡೆಯುವ ಹಕ್ಕಿನ ಕಾಯ್ದೆ ಇಲ್ಲಿ ಯುಕ್ತವಾಗಿದೆ.
B) ಮಾಹಿತಿ ಪಡೆಯುವ ಹಕ್ಕಿನ ಕಾಯ್ದೆ ಭ್ರಷ್ಟಾಚಾರದ ಆಪಾದ ಮತ್ತು ಮಾನವ ಹಕ್ಕುಗಳ ದುರ್ಬಳಕೆಗೆ ಯುಕ್ತವಾಗಿದೆ.
C) ಮಾಹಿತಿ ಪಡೆಯುವ ಹಕ್ಕಿನ ಕಾಯ್ದೆ ಮಾನವ ಹಕ್ಕುಗಳ ದುರ್ಬಳಕೆಗೆ ಸಂಬಂಧಿಸಿದ ವಿಷಯಕ್ಕೆ ಯುಕ್ತವಾಗಿದೆ.
D) ಮಾಹಿತಿ ಪಡೆಯುವ ಹಕ್ಕಿನ ಕಾಯ್ದೆ ಯುಕ್ತವಾಗಿಲ್ಲ.

65. 2019ರ ಗ್ರಾಹಕ ರಕ್ಷಣಾ ಕಾಯ್ದೆಯ ಪ್ರಕಾರ ಯಾವುದೇ ವಿಧದ ಕುಂದುಕೊರತೆಗಳ ಪ್ರಕರಣಗಳ ದೂರನ್ನು ಯಾರು ದಾಖಲಿಸಬೇಕು ?
A) ಗ್ರಾಹಕ
B) ಸ್ವಯಂಪ್ರೇರಿತ ಗ್ರಾಹಕ ಸಂಘಟನೆ
C) ಸರಕಾರ
D) ಮೇಲೆ ಸೂಚಿಸಿದವರಲ್ಲಿ ಎಲ್ಲರೂ

66. 1989ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಯ್ದೆಯ ಮುಖ್ಯ ಉದ್ದೇಶವೇನು ?
A) ಪರಿಶಿಷ್ಟ ಜಾತಿ ಮತ್ತು ಪಂಗಡದವರ ವಿರುದ್ಧದ ಎಲ್ಲಾ ವಿಧದ ಅಪರಾಧಗಳನ್ನು ತಡೆಯುವುದು
B) ಪರಿಶಿಷ್ಟ ಜಾತಿ ಮತ್ತು ಪಂಗಡದವರ ವಿರುದ್ಧದ ಎಲ್ಲಾ ರೀತಿಯ ಅಪರಾಧಗಳನ್ನು ಚರ್ಚಿಸಲು ವಿಶೇಷ ನ್ಯಾಯಾಲಯದ ಸ್ಥಾಪನೆ
C) ಪರಿಶಿಷ್ಟ ಜಾತಿ ಮತ್ತು ಪಂಗಡದ ಎಲ್ಲಾ ವಂಚಿತರ ಪುನರ್ವಸತಿ
D) ಮೇಲಿನ ಎಲ್ಲವೂ

67. 2005ರ ಹಿಂಸೆಯಿಂದ ಹೆಂಗಸರನ್ನು ರಕ್ಷಿಸುವ ಕಾಯ್ದೆಯ ಪ್ರಕಾರ, ಗೃಹಸಂಬಂಧೀ ಹಿಂಸೆಯ ಎಲ್ಲಾ ಘಟನೆಗಳ ದಾಖಲೆ (ಡಿಐಆರ್)ಗಳನ್ನು ನಿರ್ವಹಿಸುವ ಜವಾಬ್ದಾರಿ ಯಾರದ್ದು ?
A) ಬಾಧಿತ ಮಹಿಳೆ
B) ವಕೀಲ
C) ರಕ್ಷಣಾ ಅಧಿಕಾರಿ
D) ಜಿಲ್ಲೆಯ ಕಲೆಕ್ಟರ್

68. 2007ರ ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಯೋಗಕ್ಷೇಮದ ಕಾಯ್ದೆಯ ಪ್ರಕಾರ ಹಿರಿಯ ನಾಗರಿಕ ಎಂದರೆ ಯಾರು ?
A) 60 ವರ್ಷ ಮತ್ತು ಮೇಲ್ಪಟ್ಟವರು
B) 70 ವರ್ಷ ಮತ್ತು ಮೇಲ್ಪಟ್ಟವರು
C) 50 ವರ್ಷ ಮತ್ತು ಮೇಲ್ಪಟ್ಟವರು
D) 65 ವರ್ಷ ಮತ್ತು ಮೇಲ್ಪಟ್ಟವರು

69. ರಾಷ್ಟ್ರೀಯ ಮಾನವ ಹಕ್ಕುಗಳ ಕಮಿಶನ್‌ನ ಅಧ್ಯಕ್ಷರು ಯಾರು ?
A) ಎಚ್. ಎಲ್. ದತ್ತು
B) ಅರುಣ್ ಕುಮಾರ್ ಮಿಶ್ರ
C) ಸಯ್ಯದ್ ಘಯೋನುಲ್ ಹಸನ್ ರಿಜ್ವಿ
D) ರೋಹಿಂಗ್ಟನ್ ನಾರಿಮನ್

70. ರಾಜ್ಯದ ಮಾನವ ಹಕ್ಕುಗಳ ಕಮಿಶನರ್‌ನ ನೇಮಕಾತಿಯಲ್ಲಿ ಈ ಕೆಳಗಿನವರಲ್ಲಿ ಯಾರು ತೊಡಗಿರುವುದಿಲ್ಲ?
A) ರಾಜ್ಯಪಾಲ
B) ಮುಖ್ಯಮಂತ್ರಿ
C) ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು
D) ಕ್ಯಾಬಿನೆಟ್ ಮಂತ್ರಿ

71. – 4, –7, –10, ... ಈ ಶ್ರೇಣಿಯ ಕುರಿತು ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿ/ತಪ್ಪು ?
I. ಸಾಮಾನ್ಯ ವ್ಯತ್ಯಾಸ –3
II. ಅಲ್ಜಿಬ್ರಿಕ್ ರೂಪ –3n + 1
A) I ಮತ್ತು II ಸರಿ
B) I ಸರಿ ಆದರೆ II ತಪ್ಪು
C) I ಮತ್ತು II ತಪ್ಪು
D) I ತಪ್ಪು ಆದರೆ II ಸರಿ

72. ಕೆಳಗಿನ ಸಂಖ್ಯೆಯ ಗುಣಾಂಕದ ಫಲಿತಾಂಶವು ಸಂಖ್ಯಾತ್ಮಕ ಸಂಖ್ಯೆ ಆಗಿರುತ್ತದೆ. ಆ ಜೋಡಿ ಯಾವುದು ?
I. $\sqrt{0.8}, \sqrt{20}$
II. $\sqrt{0.8}, \sqrt{0.2}$
III. $\sqrt{30}, \sqrt{1.2}$
IV. $\sqrt{0.08}, \sqrt{0.02}$
A) I ಮತ್ತು II ಸರಿಯಾಗಿದೆ
B) III ಮತ್ತು IV ಸರಿಯಾಗಿದೆ
C) I ಮತ್ತು III ಸರಿಯಾಗಿದೆ
D) III ಮತ್ತು II ಸರಿಯಾಗಿದೆ

73. $|x - 2| + |x - 6| = 10$, x ನ ಮೌಲ್ಯವೆಷ್ಟು?
A) 9, – 9
B) 9, 1
C) 1, – 9
D) –1, 9

74. $\frac{1}{9} = 0.11111....$ ಇಲ್ಲಿ $\sqrt{0.44444}$ .... ಇದರ ಅಪೂರ್ಣಾಂಕ ಸ್ವರೂಪ

A) 2/3 B) 4/3 C) 2/9 D) 4/9

75. ಇಲ್ಲಿ ನೀಡಿದ $P(x) = 2x^2 + 4x - 5$ ಈ ಪಾಲಿನಾಮಿಯಲ್‌ನ ಕುರಿತು ಕೆಳಗಿನ ವಾಕ್ಯಗಳಲ್ಲಿ ಯಾವುದು ಸರಿ ?

I. $P(-1) = 7$.

II. ಈ ಪಾಲಿನಾಮಿಯಲ್‌ನ್ನು 2ರಿಂದ ಭಾಗಿಸಿದ ಪರಿಣಾಮದ ಬ್ಯಾಲೆನ್ಸ್ 1 ಆಗಿರುತ್ತದೆ.

A) I ಮತ್ತು II ಸರಿ B) I ಸರಿ ಆದರೆ II ತಪ್ಪು

C) I ಮತ್ತು II ತಪ್ಪು D) I ತಪ್ಪು ಆದರೆ II ಸರಿ

76. ಒಬ್ಬ ವ್ಯಕ್ತಿಯು ಸರಕಾರಿ ಉದ್ಯೋಗದಿಂದ 31/03/2021ರಂದು ನಿವೃತ್ತಿಯನ್ನು ಪಡೆಯುತ್ತಾನೆ. ಅವನ ಆರಂಭದ ದಿನ 25/09/2000 ಆಗಿದ್ದರೆ, ಅವನ ಉದ್ಯೋಗಾವಧಿಯು ಎಷ್ಟು ವರ್ಷಗಳು, ಎಷ್ಟು ತಿಂಗಳುಗಳು ಮತ್ತು ಎಷ್ಟು ದಿನಗಳು ?

A) 20 ವರ್ಷಗಳು, 6 ತಿಂಗಳುಗಳು ಮತ್ತು 7 ದಿನಗಳು

B) 20 ವರ್ಷಗಳು, 5 ತಿಂಗಳುಗಳು ಮತ್ತು 7 ದಿನಗಳು

C) 20 ವರ್ಷಗಳು, 5 ತಿಂಗಳುಗಳು ಮತ್ತು 6 ದಿನಗಳು

D) 20 ವರ್ಷಗಳು, 6 ತಿಂಗಳುಗಳು ಮತ್ತು 6 ದಿನಗಳು

77. ಒಂದು ವಿಶೇಷವಾದ ಸಂಕೇತವನ್ನು ಬಳಸಿಕೊಂಡು POLICE ಶಬ್ದವನ್ನು 763935 ಎಂದು ಬರೆಯಬಹುದು. CAT ಮತ್ತು DOG ಇವುಗಳನ್ನು ಅದೇ ಸಂಕೇತವನ್ನು ಬಳಸಿಕೊಂಡು ಹೇಗೆ ಬರೆಯಬಹುದು ?

I. CAT 321 II. DOG 467

A) I ಮತ್ತು II ಸರಿ B) I ಸರಿ ಆದರೆ II ತಪ್ಪು

C) I ಮತ್ತು II ತಪ್ಪು D) I ತಪ್ಪು ಆದರೆ II ಸರಿ

78. ಒಂದು ವೃತ್ತದ ಸುತ್ತಲೂ 5 ಜನರನ್ನು ವಿವಿಧ ರೀತಿಯಲ್ಲಿ ವ್ಯವಸ್ಥೆ ಮಾಡಲಾಗಿದೆ. ಒಟ್ಟು ಎಷ್ಟು ವಿಧದ ರೀತಿಯಲ್ಲಿ ವ್ಯವಸ್ಥೆ ಮಾಡಬಹುದು ?

A) 25 B) 24 C) 10 D) 20

79. ಶಂಕುನ ಮನೆಯಲ್ಲಿ ಕೆಲವು ಜನರಿದ್ದಾರೆ. ಅಲ್ಲಿರುವ ಹೆಂಗಸರ ಸಂಖ್ಯೆಯನ್ನು ಹುಡುಕಲು, ಅವರ ಒಟ್ಟು ಸಂಖ್ಯೆಯ ವರ್ಗದಿಂದ 63ನ್ನು ಕಳೆಯಬೇಕು. ಹೆಂಗಸರ ಒಟ್ಟು ಸಂಖ್ಯೆ 9. ಹಾಗಾದರೆ ಅಲ್ಲಿರುವ ಜನರ ಒಟ್ಟು ಸಂಖ್ಯೆ ಎಷ್ಟು ಮತ್ತು ಗಂಡಸರ ಸಂಖ್ಯೆ ಎಷ್ಟು?

A) 11, 2 B) 10, 1 C) 13, 4 D) 12, 3

80. 4, 8, 12, 16, .........

10, 14, 18, 22, ......

ಈ ಎರಡು ಸಮಾಂತರ ಶ್ರೇಣಿಗಳ 20 ಪದಗಳ ಒಟ್ಟು ಮೊತ್ತದ ವ್ಯತ್ಯಾಸವೆಷ್ಟು?

A) 100 B) 130 C) 120 D) 124

81. Our teacher used to _____ many interesting examples while teaching grammar.
A) cite B) sight C) site D) cight

82. Emotional stress is one of the reasons for _______, the crime of killing a new born child.
A) infanticide B) genocide C) filicide D) matricide

83. What are the _______ to become a college principal ?
A) criterion B) criteria C) criterias D) criterium

84. Meera's parents helped her to do her homework, _______ ?
A) don't they B) does she C) didn't they D) didn't she

85. Arun _______ his grandparents last week.
A) called at B) called out C) called off D) called on

86. While I was going to the market, I _______ my friend.
A) met B) have met C) had met D) meet

87. Identify the correct passive form of the given sentence.
'She is teaching Mathematics'.
A) Mathematics are being taught by her B) Mathematics is being taught by her
C) Mathematics has been taught by her D) Mathematics is taught by her

88. Read the sentence below to find out whether there is any grammatical error in it. The error if any will be in one part of the sentence. If there is no error the answer is D. Mark the answer in the response sheet.
A) No sooner had his B) father come home
C) then he started reading D) No error

89. In the question given below there is a sentence of which some parts have been jumbled up. Rearrange these parts which are labelled PQR and S to produce the correct sentence. Choose the proper sequence and mark your response in the sheet.
P. because they had so little
Q. Thousands of years ago,
R. our ancestors had to save and store
S. whatever they could save
A) QRSP B) RSQP C) QPRS D) SPQR

90. The idiom 'a red letter day' means
A) a boring day B) a sad day
C) a dangerous day D) a happy day

ಸೂಚನೆ : ಈ ಕೆಳಗಿನ (ಪ್ರಶ್ನೆಕ್ರಮ ಸಂಖ್ಯೆ **91 – 95**) ರಲ್ಲಿ ವ್ಯಾಕರಣಾಂಶಗಳ ಬಗ್ಗೆ ಬಹು ಆಯ್ಕೆ ಪ್ರಶ್ನೆಗಳನ್ನು ನೀಡಲಾಗಿದೆ. ನಾಲ್ಕು ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆಯ್ಕೆ ಮಾಡಿ ಗುರುತಿಸಿ.

91. ಈ ಕೆಳಗಿನ ಪದಗಳಲ್ಲಿ ತದ್ಧಿತಾಂತನಾಮಕ್ಕೆ ಉದಾಹರಣೆಯಾಗಿರುವ ಪದವನ್ನು ಗುರುತಿಸಿ :
A) ಓಟ
B) ಬಳೆಗಾರ
C) ಸಿರಿತನ
D) ಬಾಳದ

92. ಅನೇಕ ಉಪವಾಕ್ಯಗಳು ಒಂದು ಪ್ರಧಾನವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಬಳಸುವ ಚಿಹ್ನೆ ಈ ಕೆಳಗಿನವುಗಳಲ್ಲಿ ಯಾವುದೆಂದು ಆರಿಸಿ :
A) ಪೂರ್ಣವಿರಾಮ
B) ಅಲ್ಪವಿರಾಮ
C) ಆವರಣ
D) ಅರ್ಧವಿರಾಮ

93. ಈ ಕೆಳಗಿನ ವಾಕ್ಯಗಳಲ್ಲಿ ಸರಿಯಾದ ಅರ್ಥಪೂರ್ಣ ವಾಕ್ಯವನ್ನು ಆಯ್ಕೆ ಮಾಡಿ :
A) ನಮ್ಮ ಮನೆಯ ಸಮೀಪದಲ್ಲಿರುವ ಬಾವಿ, ಕೆರೆ, ಹಳ್ಳಗಳಲ್ಲಿನ ನೀರು ಕೊಳಕಾಗದಂತೆ ಎಚ್ಚರವಹಿಸಿ ಸಂರಕ್ಷಿಸಬೇಕು.
B) ಬಾವಿ, ಕೆರೆ, ಹಳ್ಳಗಳಲ್ಲಿನ ನಮ್ಮ ಮನೆಯ ಸಮೀಪದಲ್ಲಿರುವ ನೀರು ಕೊಳಕಾಗದಂತೆ ಎಚ್ಚರವಹಿಸಿ ಸಂರಕ್ಷಿಸಬೇಕು.
C) ಸಮೀಪದಲ್ಲಿರುವ ಬಾವಿ, ಕೆರೆ, ಹಳ್ಳಗಳಲ್ಲಿನ ನಮ್ಮ ಮನೆಯ ನೀರು ಕೊಳಕಾಗದಂತೆ ಎಚ್ಚರವಹಿಸಿ ಸಂರಕ್ಷಿಸಬೇಕು.
D) ನೀರು ಕೊಳಕಾಗದಂತೆ ನಮ್ಮ ಮನೆಯ ಸಮೀಪದಲ್ಲಿರುವ ಬಾವಿ, ಕೆರೆ, ಹಳ್ಳಗಳಲ್ಲಿನ ಎಚ್ಚರವಹಿಸಿ ಸಂರಕ್ಷಿಸಬೇಕು.

94. 'ಕಟ್ಟೆ ಪುರಾಣ' ಈ ನುಡಿಗಟ್ಟಿನ ಅರ್ಥವನ್ನು ವಿವರಿಸುವ ರೂಪವು ಈ ಕೆಳಗಿನ ಆಯ್ಕೆಗಳಲ್ಲಿ ಯಾವುದೆಂದು ಆರಿಸಿ :
A) ಕಟ್ಟೆಯಲ್ಲಿ ಕುಳಿತು ಹರಟೆ ಹೊಡೆಯುವುದು
B) ಕಟ್ಟೆಯಲ್ಲಿ ಕುಳಿತು ಪುರಾಣ ಹೇಳುವುದು
C) ವ್ಯರ್ಥ ಹರಟೆ
D) ಪುರಾಣವನ್ನು ಓದುವುದು

95. ಈ ಕೆಳಗಿನ ಆಯ್ಕೆಗಳಲ್ಲಿ 'ಗ್ರಹ' ಎಂಬ ಅರ್ಥ ಕೊಡುವ ಪದವು ಯಾವುದೆಂದು ಗುರುತಿಸಿ :
A) ಗಿರ
B) ಗರ
C) ಗಣ
D) ಗನ

ಸೂಚನೆ: ಈ ಕೆಳಗಿನ (ಪ್ರಶ್ನೆಕ್ರಮ ಸಂಖ್ಯೆ **96 – 98**) ರಲ್ಲಿ ಪ್ರಸಿದ್ಧ ಕವಿಗಳ ಕೃತಿ/ ಕಾವ್ಯನಾಮ/ ಬಿರುದು ಇತ್ಯಾದಿಗಳ ಬಗ್ಗೆ ಬಹು ಆಯ್ಕೆ ಪ್ರಶ್ನೆಗಳನ್ನು ನೀಡಲಾಗಿದೆ. ನಾಲ್ಕು ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆಯ್ಕೆ ಮಾಡಿ ಗುರುತಿಸಿ.

96. ಈ ಕೆಳಗಿನ ಕೃತಿಗಳಲ್ಲಿ ಯಾವುದು ಕೈಯಾರ ಕಿಂಞಣ್ಣ ರೈಯವರ ಕೃತಿಯಾಗಿದೆ ಎಂಬುದನ್ನು ಆರಿಸಿ :
A) ಮೂಕಜ್ಜಿಯ ಕನಸುಗಳು
B) ಶ್ರೀರಾಮಾಯಣ ದರ್ಶನಂ
C) ಐಕ್ಯಗಾನ
D) ಹೆಬ್ಬೆರಳು

97. ಈ ಕೆಳಗಿನ ಆಯ್ಕೆಗಳಲ್ಲಿ 'ಕಡಲ ತೀರದ ಭಾರ್ಗವ' ಎಂದು ಹೆಸರಾದ ಕವಿ ಯಾರೆಂದು ಗುರುತಿಸಿ :
A) ಶಿವರಾಮ ಕಾರಂತ
B) ಬಿ. ಎಂ. ಶ್ರೀ.
C) ಕುವೆಂಪು
D) ಚೆನ್ನವೀರ ಕಣವಿ

98. ಈ ಕೆಳಗಿನ ಆಯ್ಕೆಗಳಲ್ಲಿ ಮಂಜೇಶ್ವರ ಗೋವಿಂದ ಪೈಯವರಿಗೆ ಮದ್ರಾಸ್ ಸರ್ಕಾರ ನೀಡಿದ ಬಿರುದು ಯಾವುದೆಂದು ಆರಿಸಿ :
A) ರಾಷ್ಟ್ರೀಯ ಕವಿ
B) ಆದಿಕವಿ
C) ನಾಡಕವಿ
D) ರಾಷ್ಟ್ರಕವಿ

ಸೂಚನೆ: ಈ ಕೆಳಗಿನ (ಪ್ರಶ್ನೆಕ್ರಮ ಸಂಖ್ಯೆ **99 – 100**) ರಲ್ಲಿ ಆಂಗ್ಲ ನುಡಿಗಟ್ಟು / ಗಾದೆಗಳನ್ನು ನೀಡಲಾಗಿದೆ. ಅವುಗಳ ಸೂಕ್ತ ಕನ್ನಡ ರೂಪ/ ಅನುವಾದ ಗುರುತಿಸಿ.

99. "ಬಾರ್ಕಿಂಗ್ ಡಾಗ್ಸ್ ಸೆಲ್ಡಂ ಬೈಟ್" (Barking dogs seldom bite)
A) ಬೊಗಳುವ ನಾಯಿ ಕಚ್ಚುವುದಿಲ್ಲ
B) ನಾಯಿ ಕಚ್ಚುವುದಿಲ್ಲ ಬೊಗಳುವುದಿಲ್ಲ
C) ನಾಯಿ ಬೊಗಳುವುದಿಲ್ಲ ಕಚ್ಚುತ್ತದೆ
D) ನಾಯಿ ಬೊಗಳುತ್ತದೆ ಕಚ್ಚುತ್ತದೆ

100. "ಆಲ್ ದ್ಯಾಟ್ ಗ್ಲಿಟ್ಟರ್ ಈಸ್ ನಾಟ್ ಗೋಲ್ಡ್" (All that glitters is not gold)
A) ಚಿನ್ನ ಹೊಳೆಯುತ್ತದೆ
B) ಹೊಳೆಯುವುದೆಲ್ಲಾ ಚಿನ್ನವೇ
C) ಹೊಳೆಯುವುದೆಲ್ಲಾ ಚಿನ್ನವಲ್ಲ
D) ಎಲ್ಲಾ ವಸ್ತುಗಳು ಚಿನ್ನದಂತೆ ಹೊಳೆಯುತ್ತದೆ